ಚಲನವಲನಗಳನ್ನು ಬದುಕಿನ ಏಳುಬೀಳುಗಳನ್ನು ಹತ್ತಿರದಿಂದ ನೋಡಿದ ಮಹಾಬಳೇಶ್ವರರು 2009ರಲ್ಲಿ 'ಹಾವಠಣ' ಎಂಬ ಕಾದಂಬರಿ ಬರೆದರು. ಕುಂಬಾರರು ಇಂದಿನ ದಿನಗಳಲ್ಲಿ ಬದುಕಲು ಹೋರಾಡುತ್ತಿರುವುದನ್ನು ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಹಿತ್ತಾಳೆ, ತಾಮ್ರ, ಸ್ಟೀಲ್ ಪಾತ್ರೆಗಳು ಬಂದ ಬಳಿಕ ಮಣ್ಣಿನ ಪಾತ್ರೆಗಳ ಬೇಡಿಕೆ ಕುಸಿದು ಅವರ ಜೀವನ ಸಂಕಷ್ಟಕ್ಕೀಡಾದ್ದನ್ನು ಹೃದಯ ಕರಗುವಂತೆ ಮಂಡಿಸಿದ್ದಾರೆ. ಈ ಕಾದಂಬರಿ 2016ರಲ್ಲಿ 'ಸರಸ್ವತಿ ಸಮ್ಮಾನ' ಪುರಸ್ಕಾರ ಪಡೆಯಿತು. ಇದನ್ನು ಕೂಡ ನಾನು ಕನ್ನಡಕ್ಕೆ ಅನುವಾದಿಸಿದ್ದು, 'ಆವಿಗೆ' ಎಂಬ ಶೀರ್ಷಿಕೆಯಲ್ಲಿ ಮಂಗಳೂರಿನ ವಿಶ್ವ ಕೊಂಕಣಿ ಕೇಂದ್ರದ ವತಿಯಂದ ಪ್ರಕಟಗೊಂಡಿದೆ. ಮೂಲ ಕೃತಿಗೆ ವಿಶ್ವಕೊಂಕಣಿ ಕೇಂದ್ರದ ವಿಮಲಾ ಪೈ ಪ್ರಶಸ್ತಿಯೂ ಸಂದಿದೆ. ಈ ಕಾದಂಬರಿ ಇಂಗ್ಲಿಷ್ ಅನುವಾದ KILN ಎಂಬ ಹೆಸರಿನಲ್ಲಿ ಪ್ರಕಟವಾಗಿದೆ.

'ಮನುಷ್ಯನೇ ನನ್ನ ಸಾಹಿತ್ಯದ ಕೇಂದ್ರ ಬಿಂದು. ಅವನ ದುಃಖ ಸಂಕಟ, ಯಾತನೆ, ಆಶೆ, ಆಕಾಂಕ್ಷೆಗಳು, ತಳಮಳಗಳು, ಕೊಳಕು ಮನಸ್ಸಿನ ಕೃತ್ಯಗಳು ನನ್ನ ಕಥೆಗಳ ಜೀವಾಳ. ಹೆಣ್ಣು ಗಂಡಿನ ಪ್ರೀತಿ, ನಿಸರ್ಗದಾಟ. ನಿಸರ್ಗ ತನ್ನ ಸಾತತ್ಯ ಕಾಯ್ದು ಕೊಳ್ಳಲು ಅದನ್ನು ಉಪಯೋಗಿಸುತ್ತಿರುತ್ತದೆ. ಹೆಣ್ಣು ಗಂಡಿನ ಪ್ರೇಮ, ಕೇವಲ ಕಾಮತೃಪ್ತಿಯ ದಿಶೆಯಲ್ಲಿ ಸಾಗುತ್ತಿರುವುದರಿಂದ ಆ ವಿಷಯ ನನ್ನನ್ನು ಆಕರ್ಷಿಸಲಿಲ್ಲ' ಎನ್ನುತ್ತಾರೆ ಅವರು.

ಅವರು ಬಾಲ್ಯದಲ್ಲಿ ಅನುಭವಿಸಿದ ಕಷ್ಟಗಳು, ತಂದೆ ಗತಿಸಿದ ನಂತರ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ನಡೆಸಿದ ಒಂಟಿ ಹೋರಾಟ, ಸೈನ್ಯದಲ್ಲಿ ಕಂಡುಂಡ ಅನುಭವಗಳು ದಟ್ಟಕಾಡಿನಲ್ಲಿ ಏಕಾಂಗಿಯಾಗಿ ಬರಿಗಾಲಿನಲ್ಲಿ ಸೈಕಲ್ಲಿನಲ್ಲಿ ಓಡಾಡಿದ ದಿನಗಳು, ಪರಿಸರ ಪ್ರೀತಿ ಅವರ ಸಾಹಿತ್ಯದ ವಸ್ತುಗಳಾದವು. ಅವರು ನಗರ ಕೇಂದ್ರಿತ ಕಥೆಗಳನ್ನು ಬರೆಯಲಿಲ್ಲವೆಂದರೂ ತಪ್ಪಲ್ಲ. ಆದರೆ, ಅವರು ಚಿತ್ರಿಸಿದ ಹಳ್ಳಿಯ ಬದುಕಿನ ವೈವಿಧ್ಯಮಯ ಮಜಲುಗಳು ಕೊಂಕಣಿ ಕಥನ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ.

'ನನ್ನನ್ನು ಬರೆಹಗಾರರನ್ನಾಗಿ ರೂಪಿಸಲು ವಿಧಿ ಅನುಭವ ಚಕ್ರದಲ್ಲಿ ನನ್ನನ್ನು ಸುತ್ತಾಡಿಸಿತು. ಶಾಲೆಗೆ ಹೋಗುವ ಬದಲಾಗಿ ನಾನು ಪ್ರಕೃತಿ ಮಾತೆಯಿಂದ ಹೆಚ್ಚಿನ ಪಾಠ ಪಡೆಯುತ್ತಿದ್ದೆ. ನಾನು ಮಣ್ಣಿನ ಗುಣಧರ್ಮ ಗುರುತಿಸಲು ಆಕಾಶ, ಗಾಳಿ, ಮಳೆಯ ಅಂದಾಜು ಮಾಡಲು ಪ್ರಯತ್ನಿಸುತ್ತಿದ್ದೆ. ನಾನು ನೇಗಿಲು ಹಿಡಿದು ಉಳುವಾಗ ಪಕ್ಕದ ಬದುವಿನಲ್ಲಿ ಹೋಗುತ್ತಿದ್ದವನಿಗೆ 'ನೋಡು ಆಕಾಶ ಎಷ್ಟು ಕೆಂಪಗಾಗಿದೆ. ನಾಳೆ ರಾಶಿರಾಶಿ ಮೀನು ಬಲೆಯಲ್ಲಿ ಬೀಳಲಿದೆ' ಎಂದು ಹೇಳುತ್ತಿದ್ದರೆ ಅವನು ನನ್ನನ್ನು ಹುಚ್ಚನೆಂದು ಭಾವಿಸಿ ತಲೆ ಕೊಡವಿ ಹೋಗುತ್ತಿದ್ದ. ನಾನು ಹೊಲದಲ್ಲಿ ಕೆಲಸ ಮಾಡುತ್ತ ಕಾಡಿನಲ್ಲಿ ದನಗಳನ್ನು ಮೇಯಿಸುತ್ತ ನಿಸರ್ಗದೊಂದಿಗೆ ಅನು ಸಂಧಾನ ಮಾಡಿದೆ. ಗೋವಾ ಮತ್ತು ಕರ್ನಾಟಕದ ಸರಹದ್ದಿನ ಕಾಡಿನಲ್ಲಿ ಹೆಚ್ಚು ಓಡಾಡಿದ್ದೇನೆ. ನನಗೆ ಕಾಡಿನ ಅನೇಕ ಗಿಡಮರ, ಪ್ರಾಣಿಪಕ್ಷಿಗಳ ಹೆಸರು ಕಂಠಪಾಠವಿದೆ. ಒಮ್ಮೆ ನಾನು ಕಾಡಿನಲ್ಲಿ ಒಂಟಿಯಾಗಿ ಹೋಗುತ್ತಿದ್ದಾಗ ಒಂದು ಬರಡು ಪ್ರದೇಶದಲ್ಲಿ ಹುಲಿಯೊಂದು ಬಿಸಿಲು ಕಾಯಿಸುತ್ತಾ ಕುಳಿತುದನ್ನು ನೋಡಿದ್ದೇನೆ. ಪ್ರಾಣಿ ಸೃಷ್ಟಿ, ನಿಸರ್ಗ ಮತ್ತು ಮಾನವರಲ್ಲಿ ಒಂದು ಬಗೆಯ ಆಂತರಿಕ ಅವಿನಾಭಾವ ಸಂಬಂಧ ಇರಬೇಕೆನಿಸುತ್ತದೆ. ಒಂದಿಲ್ಲದಿದ್ದರೆ ಇನ್ನೊಂದು ಅಪೂರ್ಣ. ನನ್ನ ಸಾಹಿತ್ಯದಲ್ಲಿ ನಿಸರ್ಗ ತಾನೇ ತಾನಾಗಿ ಬರುತ್ತದೆ. ಅದರಲ್ಲಿ ಕಾಡಿನ ಸೊಬಗು, ಸೌಂದರ್ಯ ಇರುತ್ತದೆ. ಜೀವಂತಿಕೆಯಿರುತ್ತದೆ. ನನ್ನ ಯಶಸ್ಸಿನಲ್ಲಿ ಪ್ರಕೃತಿಯ ದೊಡ್ಡ ಪಾಲು ಇದೆ. ನನಗೆ ಪ್ರಕೃತಿಯಿಲ್ಲದ ಸಾಹಿತ್ಯ ಅಪೂರ್ಣ ಎನಿಸುತ್ತದೆ' ಎನ್ನುತ್ತಾರೆ ಮಹಾಬಳೇಶ್ವರ.

ನಾನು ಮಹಾಬಳೇಶ್ವರರ ಆಯ್ದ ಕಥೆಗಳ ಸಂಕಲನ 'ಕಥಾಕಣಜ' ಎಂಬ ಹೆಸರಿನಲ್ಲಿ ಅನುವಾದಿಸಿದ್ದೇನೆ. ಅದನ್ನು ಕುವೆಂಪು ಭಾಷಾಭಾರತಿ ಪ್ರಕಟಿಸಿದೆ. ಅದರಲ್ಲಿ ಹದಿನೇಳು ಕಥೆಗಳು ವಿಭಿನ್ನವಾಗಿವೆ. 'ತೊಟ್ಟು' ಕಥೆಯಲ್ಲಿ ಪ್ರೊಫೆಸರೊಬ್ಬರು ಬ್ರಹ್ಮಾಂಡದ ಚಲನವಲನಗಳ ಬಗ್ಗೆ ಅಧಿಕೃತವಾಗಿ ಮಾತನಾಡುವ ಸಾಮರ್ಥ್ಯ ಹೊಂದಿದ್ದರೂ ಭೌತಿಕ ಪ್ರಪಂಚದ ಸಮಸ್ಯೆಗಳಿಗೆ ಮುಖಾಮುಖಿಯಾಗಿ ನಿಂತಾಗ ಅವರು ಸಂಪಾದಿಸಿದ ವಿದ್ವತ್ತು ತೃಣಸಮಾನವೆನಿಸುತ್ತದೆ. 'ಚಿಗುರು' ಕಥೆ ಬಡತನದ ದಾರುಣ ಚಿತ್ರ ಬಿಚ್ಚಿಡುತ್ತದೆ.